ನಖಾತೆ ಆನಂದರಾವ್, ಮೈಸೂರು
*ಹಿಂದಿನ ಕಾಲದಲ್ಲಿ ತಪಸ್ವಿಗಳು, ಮಹಾನ್ ಋಷಿಗಳು ಗಡ್ಡವನ್ನೇಕೆ ಬಿಡುತ್ತಿದ್ದರು?*




ಅವರು ಕುಳಿತಲ್ಲಿ ಒಳ್ಳೆಯ ಕ್ಷೌರದಂಗಡಿಯಾಗಲಿ, ಷೇವಿಂಗ್ ಸೆಟ್ ಆಗಲಿ ಸಿಗುತ್ತಿರಲಿಲ್ಲವಂತೆ.

ಕಣ್ಣೂರು ವಿ. ಗೋವಿಂದಾಚಾರಿ, ಮೈಸೂರು
*ಅಂದು ಹರಕಲನ್ನು ಹೊಲಿದು ಧರಿಸುತ್ತಿದ್ದರು; ಇಂದು ಹರಿದುದನ್ನು ಧರಿಸುವುದೇ ಫ್ಯಾಶನ್; ಮುಂದೆ?*
ಆಜಾನು-ಕೇಶಿ ಯುವತಿಯರು, ಆಜಾನು-ಗಡ್ಡ ಯುವಕರು ಕಾಣಬರುವರಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ನಮ್ಮವರೇ ನಮ್ಮನ್ನು ಕಾಲ್ಚೆಂಡಿನಂತೆ ಒದೆಯುತ್ತಿದ್ದಾರೆ. ಏನು ಮಾಡಲು ಸಾಧ್ಯ?*
ಅವರು ಬಯಸುವ ಗೋಲ್ ತಲುಪಿಬಿಡಿ, ತಲೆಯ ಮೇಲೆ ಹೊತ್ತು ಮೆರೆಯುತ್ತಾರೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ನುಡಿದರೆ ಮುತ್ತಿನ ಹಾರದಂತಿರಬೇಕು. ಕುಡಿದರೆ?*



ನಾಲಿಗೆ ತೊದಲದಂತಿರಬೇಕು, ಬ್ಯಾಲೆನ್ಸು ತಪ್ಪದಂತಿರಬೇಕು.

ಎಂ.ಎ. ಕುಮಾರ್, ಬೆಂಗಳೂರು
*ವಿಭೂತಿ, ಕುಂಕುಮ, ನಾಮಗಳಲ್ಲಿ ಯಾವುದಕ್ಕೆ ಹೆಚ್ಚು ಶಕ್ತಿ?*
ನಾಮಕ್ಕೇ... ಅದನ್ನು ಹಾಕುವವರೇ ಹೆಚ್ಚಾಗಿ ಸಿರಿವಂತರಾಗಿರುವುದೇ ಅದಕ್ಕೆ ಸಾಕ್ಷಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಹೆಂಡತಿಯನ್ನು ಮೇಣದ ಬತ್ತಿ, ಪ್ರೇಯಸಿಯನ್ನು ಮರ್ಕ್ಯುರಿ ಲೈಟ್ ಎಂದೇಕೆ ಹೇಳುವರು?*
ಕರೆಂಟ್ (ಶಕ್ತಿ) ಇದ್ದಾಗ ಮಾತ್ರ ಲೈಟ್, ಶಕ್ತಿ ಉಡುಗಿದಾಗ ಮೇಣದ ಬತ್ತಿ ಬೆಳಗುವುದರಿಂದ.

ಎಚ್.ಜಿ. ಜಗದೀಶ್, ಮೈಸೂರು
*ಟಿವಿ ಧಾರಾವಾಹಿಗಳ ನಿರ್ದೇಶಕರುಗಳಿಗೆ ತರಬೇತಿ ಎಲ್ಲಿ ನೀಡುತ್ತಾರೆ ರಾಂಜಿ?*
ಗ್ಲಿಸರಿನ್, ಚ್ಯೂಯಿಂಗ್ ಗಮ್ ಮತ್ತು ಎಲಾಸ್ಟಿಕ್ ಕಂಪನಿಗಳಲ್ಲಿ.

ಹೆಚ್.ಎಂ. ಅನಂತಪದ್ಮನಾಭ, ಮೈಸೂರು
*ಒಳ್ಳೆಯ ಹೆಂಡತಿ ಸಿಕ್ಕರೆ ಸದ್ಗೃಹಸ್ಥನಾಗುತ್ತಾನೆ. ಕೆಟ್ಟ ಹೆಂಡತಿ ಸಿಕ್ಕರೆ...?*
ಸದ್ದಿಲ್ಲದ ಗೃಹಸ್ಥನಾಗುತ್ತಾನೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಕಲ್ಲರಳಿ ಹೂವಾಗುವಂತಿದ್ದರೆ...?*
ಎಸೆದಾಗ ಕಲ್ಲು, ಬಿದ್ದಾಗ ಹೂವು ಆಗಿ ಸ್ಟ್ರೈಕ್‌ನ ಮಜವೇ ಹೊರಟುಹೋಗುತ್ತಿತ್ತು.

ಸುಂದರ್, ಬೆಂಗಳೂರು
*ಕಾಲ ಬದಲಾದರೂ ಇನ್ನೂ ಪುಢಾರಿಗಳ ತಲೆಯ ಮೇಲೆ ಬಿಳಿ ಟೋಪಿ ಏಕೆ?*
ಜೀವವಿಲ್ಲದುದರ ಮೇಲೆ ಬಿಳಿ ಹೊದಿಕೆ ಹೊದಿಸುವುದು ಇನ್ನೂ ಚಾಲ್ತಿಯಲ್ಲಿರುವುದರಿಂದ.

ಎನ್.ವಿ. ಶ್ರೀನಿವಾಸ್, ಮೈಸೂರು
*ಪೊಲೀಸ್ ಅಧಿಕಾರಿಗಳ ಮೇಜಿನ ಮೇಲೆ ಭೂಗೋಳ (ಗ್ಲೋಬ್) ಏಕೆ ಇಟ್ಟಿರುತ್ತಾರೆ?*
ಅವರದು ಇಡೀ ಭೂಮಿಯ ಗೋಳನ್ನು ತಿರುತಿರುಗಿ ಕೇಳಬೇಕಾದ ಕೆಲಸ ಎಂದು ಸೂಚಿಸಲು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಕಾಡುವ ಚಿಂತೆಗೂ, ಸುಡುವ ಚಿತೆಗೂ ಏನು ಸಂಬಂಧ?*
ಎರಡೂ ಬುರುಡೆ ಕಾಯಿಸುತ್ತವೆ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ರಾಜಕೀಯಕ್ಕೆ ಎಂಟ್ರಿ ಕೊಡಲು ಇರಬೇಕಾದ ಅರ್ಹತೆಗಳೇನು ಸಾರ್?*
ಗುಣ ಮೈನಸ್, ಹಣ ಪ್ಲಸ್, ಜನ ಡಿವೈಡ್, ಹಗರಣ ಮಲ್ಟಿಪ್ಲೈ ಮಾಡಿಕೊಂಡರೆ ಸಾಕು.

## ಬಹುಮಾನಿತ ಪ್ರಶ್ನೆ

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ವಾರ್ತೆಯಲ್ಲಿ 'ಸ್ಫೋಟದಲ್ಲಿ 3 ಪೊಲೀಸರು, 5 ನಾಗರಿಕರು ಗಾಯಗೊಂಡರು' ಎಂದಿದೆ. ಅಂದರೆ, ಪೊಲೀಸರು ಅನಾಗರಿಕರೆ?*
ಸುದ್ದಿ ಸರಿಯಿದೆ. ಮೊದಲೇ ಅವಾಚ್ಯ ಆಡುವವರು ಗಾಯಗೊಂಡಾಗ ನಾಗರಿಕರಾಗಿರುವುದು ಅಸಾಧ್ಯ.

ಎಚ್.ಆರ್. ದೇಸಾಯಿ, ರಾಯಚೂರು
*ಗಂಡ ಒರಳು; ಹೆಂಡತಿ ಒನಕೆ; ಮಕ್ಕಳು?*
ಸೂಪರ್ ಹಿಟ್.

ಸುಜ್ಞಾನಾಚಾರ್ ಕೆ.ಪಿ. ಕಲಿಕೆರೆ
*ಮನೆಯಲ್ಲಿ ಸತ್ತರೆ ಉತ್ತಮ; ದಾರಿಯಲ್ಲಿ ಸತ್ತರೆ ಮಧ್ಯಮ. ಆಸ್ಪತ್ರೆಯಲ್ಲಿ ಸತ್ತರೆ?*
ಕ್ರಮ ಹೀಗಿದೆ – ಮನೆಯಲ್ಲಿ ಸತ್ತರೆ ಉತ್ತಮ; ಆಸ್ಪತ್ರೆಯಲ್ಲಿ ಮಧ್ಯಮ; ದಾರಿಯಲ್ಲಿ ಸತ್ತರೆ ಉಜ್ಜೀ ಉಜ್ಜೀ ತೋರಿಸುವ ಮಾಧ್ಯಮ!

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
*ರಾಜಕಾರಣಿಗಳು ಪ್ರತಿಯೊಂದು ವಿಷಯದಲ್ಲೂ ರೈತರ ಹೆಸರನ್ನು ಬಳಸಿಕೊಳ್ಳುವುದೇಕೆ?*



ಏಕೆಂದರೆ ರಾಜಕಾರಣಿಗಳ ಹಗರಣಗಳೆಂಬ ಪಲಾವಿಗೆ ರೈತ ರಾಯತ!

ಪಿ. ಚಿದಾನಂದ, ಜವನಗೊಂಡನಹಳ್ಳಿ
*ಮನುಷ್ಯ ಹುಟ್ಟಿದ್ದು ಏಕೆ?*
ಅದೊಂದು ಪ್ರಕೃತಿಯು ಕೋತಿಯ ಲೇಟೆಸ್ಟ್ ವರ್ಷನ್ ಹೊರತರಲು ಬಯಸಿದಾಗ ಸಂಭವಿಸಿದ ಆಕಸ್-ಮಿಕ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ನಿಮ್ಮ ಹೆಸರು ರಾಮ ಬದಲಾಗಿ ರಾವಣ ಎಂದು ಇದ್ದಿದ್ದರೆ ಹೇಗಿರುತ್ತಿತ್ತು ಸಾರ್?*
ಒಟ್ಟಿಗೆ ಹತ್ತು ಅಂಕಣಕ್ಕೆ ಉತ್ತರಿಸುವ ಸಾಧ್ಯತೆ ಇರುತ್ತಿತ್ತು.

■ ರಾಮ್